

# ಭಾರತದ ಮಗಳ ಅಮ್ಮ

2–3 ವಾರಗಳಿಂದ 'ಇಂಡಿಯನ್ ಡಾಟರ್' ಸಾಕ್ಷ್ಯಚಿತ್ರ ಸುದ್ದಿಯಲ್ಲಿದೆ. ಟೀವಿಯಲ್ಲಂತೂ ಈ ಸಾಕ್ಷ್ಯಚಿತ್ರದ ಪರ ಮತ್ತು ವಿರೋಧ ವಹಿಸಿ ಎರಡು ಪ್ರಮುಖ ಚಾನೆಲ್‌ಗಳು 'ಮಹಾಭಾರತ'ವನ್ನೇ ನಡೆಸಿವೆ. ಈ 'ಭಾರತದ ಮಗಳ' ಅಮ್ಮ ಅರ್ಥಾತ್, ಚಿತ್ರದ ನಿರ್ಮಾಪಕಿ ಲೆಸ್ಲೀ ವುಡ್ವಿನ್ ಎಂಬ ಹೆಣ್ಣುಮಗಳು ತನ್ನ ಚಿತ್ರದ ಮೇಲಿನ ನಿಷೇಧವನ್ನು ಭಾರತ ಸರ್ಕಾರ ವಾಪಸ್ ಪಡೆಯುವಂತೆ ಮಾಡಲು ಕೋರ್ಟಿನ ಕದ ತಟ್ಟಿದ್ದಾರೆ. ಹೈಕೋರ್ಟ್ ಇವರ ವಾದಕ್ಕೆ ಮನ್ನಣೆ ನೀಡಿಲ್ಲ. ಮುಂದೆ ಸುಪ್ರೀಂಕೋರ್ಟ್ ಏನು ಹೇಳುತ್ತದೋ ನೋಡಬೇಕು. ಸಾಮಾನ್ಯವಾಗಿ ನಿಷೇಧಕ್ಕೆ ಒಳಗಾದದ್ದನ್ನು ನೋಡುವ ಕುತೂಹಲ ಹೆಚ್ಚು. ಹಾಗಾಗಿ ಯೂಟ್ಯೂಬ್‌ನಲ್ಲಿ ಸಾವಿರಾರು ಜನರು ರಾತ್ರಿ ಹಗಲು ತಡಕಾಡಿ ಹುಡುಕಿ ಈ ಸಿನಿಮಾವನ್ನು ನೋಡಿದ್ದಾರೆ. ನೋಡದವರು ಇದನ್ನು ನೋಡಲೇಬೇಕೆಂಬ ಒತ್ತಡಕ್ಕೆ ಒಳಗಾಗಿದ್ದಾರೆ. ಒಟ್ಟಾರೆ ಈ ಸಾಕ್ಷ್ಯಚಿತ್ರವನ್ನು ನಿಷೇಧಿಸಿರುವುದು, ಚಿತ್ರಕ್ಕೆ ಅಪರಿಮಿತ ಪ್ರಚಾರ ಕೊಟ್ಟಂತಾಗಿದೆ. ಇನ್ನೊಂದೆಡೆ ಭಾರತದಲ್ಲಿ ಬಹುತೇಕರಿಗೆ ಅಪರಿಚಿತೆ ಆಗಿದ್ದ ಲೆಸ್ಲೀ ವುಡ್ವಿನ್ ರಾತ್ರಿ ಬೆಳಗಾಗುವುದರೊಳಗೆ 'ಸೆಲೆಬ್ರಿಟಿ' ಆಗಿದ್ದಾರೆ.

ಇಸ್ರೇಲಿನಲ್ಲಿ ಜನಿಸಿದ ಲೆಸ್ಲಿ ಉಡ್ವಿನ್ ಬ್ರಿಟನ್ನಿನ ಪ್ರಜೆ. ಇನ್ನೂ ಮೂರು ವರ್ಷದ ಎಳವೆಯಲ್ಲೇ ಸಿನಿಮಾದ ಆಕರ್ಷಣೆಗೆ ಒಳಗಾದವರು. 'ನಮ್ಮ ಪಕ್ಕದ ಮನೆಯಲ್ಲಿ ಸಿನಿಮಾ ಶೂಟಿಂಗ್ ನಡೆಯುತ್ತಿತ್ತು. ಅದನ್ನು ನೋಡಿ ನನಗೂ ನಟಿಸಬೇಕೆಂಬ ಆಸೆಯಾಯಿತು. ಹೋಗಿ ಯೂನಿಟ್‌ನವರಲ್ಲಿ ಕೇಳಿದೆ. ಆ ಚಿತ್ರದಲ್ಲಿ ಮೂರೂವರೆ ವರ್ಷದ ಮಗುವಿನ ಪಾತ್ರ ಇರಲಿಲ್ಲ. ಆದರೆ ನನ್ನ ಚೂಟಿ ಮಾತುಗಳಿಂದ ಖುಷಿಪಟ್ಟ ಕ್ಯಾಮೆರಾಮನ್ ನನ್ನನ್ನು ಅಷ್ಟೂ ದಿನ ಮಡಿಲಲ್ಲಿ ಕೂರಿಸಿಕೊಂಡು ಚಿತ್ರೀಕರಣ ಮಾಡಿದರು. ಆಗಲೇ ನನಗೆ ಸಿನಿಮಾದ ಕುರಿತು ಮೋಹ ಹುಟ್ಟಿತ್ತು' ಎಂದು ಲೆಸ್ಲೀ ಉಡ್ವಿನ್ ಕೆಲವು ವರ್ಷಗಳ ಹಿಂದೆ ಸಂದರ್ಶನವೊಂದರಲ್ಲಿ ಹೇಳಿದ್ದರು.

ಹಾಗೆ ನೋಡಿದರೆ ಲೆಸ್ಲೀ ಉಡ್ವಿನ್ ಸಿನಿಮಾ ರಂಗ ಪ್ರವೇಶಿಸಿದ್ದು ನಟಿಯಾಗಿ. ರಂಗಭೂಮಿಯ ಬಗ್ಗೆ ಹರೆಯದಲ್ಲಿ ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದ ಈಕೆ ನಟಿಯಾದದ್ದೂ ಆಕಸ್ಮಿಕವಾಗಿ. 'ಫಾರ್ಗೊಟ್ಟನ್ ಪ್ರಿಸನರ್ಸ್' ಚಿತ್ರದಲ್ಲಿ ರಾಜಕೀಯ ಕೈದಿಯೊಬ್ಬನ ಪತ್ನಿಯ ಪಾತ್ರ. 1980ರಲ್ಲಿ ಮರ್ಚೆಂಟ್ ಆಫ್ ವೆನಿಸ್ ಚಿತ್ರದಲ್ಲೂ ಪ್ರಮುಖ ಪಾತ್ರವಿತ್ತು. ಆದರೆ ನಟನೆಗೆ ಸಾಕಷ್ಟು ಶ್ರಮ ಹಾಕಬೇಕೆಂಬ ಅಂಶ ಈಕೆಯಲ್ಲಿ ನಟನೆಯ ಬಗ್ಗೆ ನಿರಾಸಕ್ತಿ ಹುಟ್ಟಿಸಿತು. 'ಸಿಟ್ಟಿಂಗ್ ಟಾರ್ಗೆಟ್ಸ್' ಎನ್ನುವ ಸಿನಿಮಾಕ್ಕೆ ಕನ್ಸಲ್ಟಂಟ್ ಆಗಿ ಕೆಲಸ ಮಾಡಿದ್ದು ಹೊಸ ಅನುಭವ. ಅದಕ್ಕೆ ಕಾರಣ ಈ ಸಿನಿಮಾದ ಕಥೆ ಈಕೆಯ ನಿಜಜೀವನಕ್ಕೇ ಸಂಬಂಧಿಸಿದ್ದು. ಮನೋವಿಕಾರವುಳ್ಳ ಬಾಡಿಗೆ ಮನೆ ಒಡೆಯನೊಬ್ಬನ ವಿರುದ್ಧ ಈಕೆ ನಡೆಸಿದ ಹೋರಾಟವೇ ಈ ಚಿತ್ರದ ಕಥೆಯಾಗಿತ್ತು. ಚಿತ್ರಕಥೆಗೆ ಮಾಡಿದ ಕೆಲಸ ಮತ್ತು ಅಲ್ಲಿ ನಿರ್ಮಾಪಕ ಮಾರ್ಕ್ ಶಿವಾಸ್ ಜತೆಗಿದ್ದ ನಿಕಟ ಸ್ನೇಹ ಕಸುಬು ಕಲಿಯುವಂತೆ ಮಾಡಿತು. ಅಲ್ಲಿಂದ ನಿರ್ಮಾಪಕಿಯ ಹೊಸ ಪಾತ್ರ ಸುಲಭವಾಯಿತು. ಈಕೆ ನಿರ್ಮಿಸಿದ ಮೊದಲ ಚಿತ್ರ 'ಹೂ ಬಾಂಬ್ಡ್ ಬರ್ಮಿಂಗ್‌ಹ್ಯಾಮ್' ದೊಡ್ಡ ಸುದ್ದಿಯನ್ನೇ ಮಾಡಿತು. ಆಗ ಬ್ರಿಟನ್ ಪ್ರಧಾನಿಯಾಗಿದ್ದ ಮಾರ್ಗರೆಟ್ ಥ್ಯಾಚರ್, 'ದೇಶದಲ್ಲಿ ಟೀವಿಯಲ್ಲಿ ಕ್ರಿಮಿನಲ್ ವಿಚಾರಣೆ ನಡೆಯಲು ನಾವು ಬಿಡುವುದಿಲ್ಲ' ಎಂದು ಅಬ್ಬರಿಸಿದ್ದರು. ಆದರೆ ಈ ಚಿತ್ರದ ಪರಿಣಾಮವಾಗಿ ತಪ್ಪೇ ಮಾಡದೆ 17 ವರ್ಷಗಳಿಂದ ಜೈಲಿನಲ್ಲಿದ್ದ ಆರು ಅಮಾಯಕರು ಬಿಡುಗಡೆಯಾದರು.

ಭಾರತವಾಗಲೀ, ಇಲ್ಲಿ ಚಿತ್ರ ನಿರ್ಮಾಣವಾಗಲೀ ಲೆಸ್ಲೀ ಉಡ್ವಿನ್‌ಗೆ ಹೊಸತೇನಲ್ಲ. ಈ ಹಿಂದೆಯೂ ಅವರು ಭಾರತಕ್ಕೆ ಬಂದು ಒಂದೆರಡು ವರ್ಷ ಇಲ್ಲೇ ಇದ್ದು ಚಿತ್ರಗಳನ್ನು ನಿರ್ಮಿಸಿದ್ದಾರೆ. ಈಕೆಯ ಚಿತ್ರ ನಿರ್ಮಾಣ ಕಂಪೆನಿ ಅಸಾಸಿನ್ ಫಿಲಂಸ್ ಹುಟ್ಟಿದ್ದು 1989ರಲ್ಲಿ. 1999ರಲ್ಲಿ 'ಈಸ್ಟ್ ಈಸ್ ಈಸ್ಟ್' ಎನ್ನುವ ಲೆಸ್ಲೀ ನಿರ್ಮಿಸಿದ ಸಿನಿಮಾದಲ್ಲಿ ನಮ್ಮ ಓಂಪುರಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದರು. ಆ ಚಿತ್ರದ ಎರಡನೇ ಭಾಗ 'ವೆಸ್ಟ್ ಈಸ್ ವೆಸ್ಟ್' 2010ರಲ್ಲಿ ತೆರೆಗೆ ಬಂತು. ಅದರಲ್ಲೂ ಓಂಪುರಿ ಇದ್ದರು. ಮೂರನೇ ಭಾಗ 'ಈಸ್ಟ್ ಈಸ್ ವೆಸ್ಟ್' ಕೂಡಾ ಶೀಘ್ರ ಬರಲಿದೆಯಂತೆ.

ಸ್ವತಃ ಅತ್ಯಾಚಾರ ಸಂತ್ರಸ್ತೆಯಾಗಿರುವ ಲೆಸ್ಲೀ ಉಡ್ವಿನ್, 'ಇಂಡಿಯಾಸ್ ಡಾಟರ್' ಸಾಕ್ಷ್ಯಚಿತ್ರದಲ್ಲಿ ದೆಹಲಿಯ ನಿರ್ಭಯಾ ಅತ್ಯಾಚಾರ ಪ್ರಕರಣವನ್ನು ಅತ್ಯಂತ ಸಂಯಮ ಮತ್ತು ಸೂಕ್ಷ್ಮತೆಯೊಂದಿಗೆ ವಿಶ್ಲೇಷಿಸಿದ್ದಾರೆ. ಬಹುತೇಕ ಈ ಸಾಕ್ಷ್ಯಚಿತ್ರ ನೋಡದ ರಾಜಕಾರಣಿಗಳೇ ಅದರ ವಿರುದ್ಧ ಕಿಡಿಕಾರಿ, ಅದರ ನಿಷೇಧಕ್ಕೆ ಕಾರಣರಾಗಿದ್ದಾರೆ. ಭಾರತದ ಬಗ್ಗೆ ಸಾಕಷ್ಟು ಪ್ರೀತಿ ಹೊಂದಿರುವ ಉಡ್ವಿನ್, ಐದಾರು ವರ್ಷಗಳ ಹಿಂದೆಯೇ ಸಂದರ್ಶನವೊಂದರಲ್ಲಿ, 'ನನ್ನ ಮೆಚ್ಚಿನ ಸಿನಿಮಾ ಅಟೆನ್‌ಬರೋ ನಿರ್ದೇಶನದ ಗಾಂಧಿ' ಎಂದಿದ್ದರು. ಗಾಂಧಿಯಾಗಿ ನಟಿಸಿದ ಬೆನ್ ಕಿಂಗ್‌ಸ್ಲೇ ಈಕೆಯ ಮೆಚ್ಚಿನ ನಟ. ನಿಷೇಧದ ರಾಜಕಾರಣದ ಮಧ್ಯೆ ಈಕೆಯ ಭಾರತ ಪ್ರೀತಿಯ ಬಗ್ಗೆಯೂ ಅನುಮಾನಗಳನ್ನು ವ್ಯಕ್ತಪಡಿಸಲಾಗುತ್ತಿದೆ. 57ರ ಇಳಿವಯಸ್ಸಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ಕಾದಾಡುತ್ತಿರುವ ಈಕೆ ಹೋರಾಟವನ್ನು ಗೆಲ್ಲಬಹುದೆ..?

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65